PUBLIC ACCOUNTS COMMITTEE

Appointment of Chairman.

Mr. SPEAKER:—Under sub-rule (3) of rule 196 of the Rules of Procedure and Conduct of Business in the Mysore Legislative Assembly, I have nominated Sri S. D. Kothavale as Chairman of the Public Accounts Committee.

Now the subject is Call Attention Notice by Sri L. Srikantaiah.....

Members' Representations

ಶ್ರೀ ಎಸ್. ಶಿವಪ್ಪ.—ಮಾನ್ಯ ಮುಖ್ಯ ಮಂತ್ರಿಗಳು ತಮಗೆ ಗೊತ್ತಿರುವ ಹಾಗೆ ವಿವರಣೆಯನ್ನೇನೋ ಕೊಟ್ಟರು. ಆದರೆ ಅದರಿಂದ ನಮಗೆ ಸಮಾಧಾನವಾಗಲಿಲ್ಲ.

ಅಧ್ಯಕ್ಷರು.—ತಾವೇ ಸರಕಾರದವರ ಕಡೆಯಿಂದ ವಿವರಗಳು ಬೇಕೆಂದು ಕೇಳಿದಿರಿ ಈಗ ಹೀಗೆ ಹೇಳಿದರೆ ನನಗೆ ಬಹಳ ಕಷ್ಟವಾಗುತ್ತದೆ.

ಶ್ರೀ ಎಸ್. ಗೋಪಾಲಗೌಡ.—ವಿರೋಧ ಪಕ್ಷದ ಸದಸ್ಯರು ಹೀಗೆ ಹೇಳುತ್ತಾರೆಂತಲೋ ?

ಅಧ್ಯಕ್ಷರು.—ತಾವೊಬ್ಬರೇ ವಿರೋಧ ಪಕ್ಷದ ಸದಸ್ಯರಲ್ಲ. ವಿರೋಧ ಪಕ್ಷದ ನಾಯಕರು ಹಾಗೂ ಇತರರೂ ಇದ್ದಾರೆ. ಅವರನ್ನೂ ಕೇಳಬೇಕು. ತಾವು ಪ್ರತಿ ಹೆಜ್ಜೆ ಹೆಜ್ಜೆಗೂ ಎದ್ದು ಈ ರೀತಿ ಮಾಡಬಾರದು.

ಶ್ರೀ ಎಸ್. ಗೋಪಾಲಗೌಡ.—ನಾನು ಕೇಳುತ್ತಿರುವುದು..... .....

Mr. SPEAKER.—Order, order... .....

ಶ್ರೀ ಎಸ್. ಗೋಪಾಲಗೌಡ.—ತಾವು ಈ ರೀತಿ ಆಕ್ಷೇಪಣೆ ಮಾಡುವುದು ಸರಿಯಲ್ಲ.

Mr. SPEAKER.—Order, order. ಮಾನ್ಯ ಗೋಪಾಲಗೌಡರು, ಸ್ವಲ್ಪ ಸಮಾಧಾನದಿಂದ ಕೇಳಬೇಕು. ನುಮಾರು ನಾಲ್ಕೂವರೆ ಗಂಟೆಯ ಕಾಲ ಈ ಒಂದು ಪ್ರಶ್ನೆಯ ಬಗ್ಗೆ ಇಷ್ಟೆಲ್ಲಾ ಚರ್ಚೆಯಾಗಿ ವಿವರಣೆ ಕೊಟ್ಟನಂತರವೂ ತಾವು ಇದನ್ನು ಒಪ್ಪುವುದಕ್ಕಾಗುವುದಿಲ್ಲ ಎಂದು ಹೇಳಿದರೆ ನಾನೇನು ಮಾಡುವುದಕ್ಕಾಗುತ್ತದೆ ? ಈ ಪ್ರಕಾರವಾಗಿ ತಪ್ಪು ತಪ್ಪು ಭಾವನೆಗಳಿಂದ ಹೇಳುವುದನ್ನು ಸರಿತುಬಿಡುವುದು ಒಳ್ಳೆಯದು. ನಾನು ವಿಧಾನವನ್ನು ತಮಗೆ ತಿಳಿಸಿದ್ದೇನೆ.

ಎರಡನೆಯದು, ನಿಮಗೆ ಇಷ್ಟ ಬಂದ ಪ್ರಕಾರ ಒಂದು ಸಾರಿಯಿಲ್ಲ, ಎರಡು ಸಾರಿ ಹಾಗೂ ಇತರರಿಗೆ ಅವಕಾಶ ಕೊಟ್ಟುದು ತಪ್ಪು ಎಂದು ತಾವು ನಿರ್ಣಯಕ್ಕೆ ಬರುವುದಾದರೆ ಅದಕ್ಕೆ ನಾನೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ತಾವು ಇಲ್ಲಿ ಹೇಳುತ್ತಿರುವುದು ಇದೇನು ರೂಲಿಂಗೋ ಅಥವಾ ನಮಗೆ ಬುದ್ಧಿವಾದವೋ, ತಿಳಿಯುತ್ತಿಲ್ಲ.

ಅಧ್ಯಕ್ಷರು.—ತಾವು ಇದನ್ನು ಹೇಗೆ ಬೇಕಾದರೂ ತಿಳಿದುಕೊಳ್ಳಬಹುದು. ಅದಕ್ಕೆ ನನ್ನ ಅಡ್ಡಿಯಿಲ್ಲ.

†ಶ್ರೀ ಎಸ್. ಚನ್ನಯ್ಯ.—ಸ್ವಾಮಿ, ಏನು ತಾವಿಷ್ಟು ಕೋಪದಿಂದ ಮಾತಾಡುತ್ತಿದ್ದೀರಿ ? ನಾವು ಇಲ್ಲಿ ಇರಬೇಕೋ ಬೇಡವೋ ಎಂದನಿಸುತ್ತಿದೆ. ಹೀಗೆಲ್ಲಾ ಮಾತಾಡಬಾರದು. ಸ್ಪೀಕರ್ ಆಗಿದ್ದಾರೆಂದು ತಮಗೆ ಇಷ್ಟಬಂದಂತೆ ಮಾಡಬಹುದು. ತಪ್ಪಾಗಿದೆ ಎಂದು ಇಲ್ಲಿ ಹೇಳಿ ಅದನ್ನು ಅವರಿಗೆ ಸಮಾಧಾನವಾಗುವಂತೆ ಹೇಳಿ ಸಮಾಧಾನ ಮಾಡುವುದು ನಿಮ್ಮ ಕರ್ತವ್ಯ. ಇಲ್ಲಿಯ ಸದಸ್ಯರನ್ನು ತಾವು ಮಕ್ಕಳಂತೆ ಕಾಣುವುದು ಗೌರವವಲ್ಲ. ಮಕ್ಕಳಂತೆ ನಾವು ಇಲ್ಲಿಗೆ ಬಂದಿಲ್ಲ. ತಾವು ಇಲ್ಲಿ ಇಷ್ಟು ಜಬರ್‌ದಸ್ತಿನಿಂದ ಮಾತನಾಡಿದರೆ ನಾವೂ ಅದೇ ರೀತಿ ಜಬರ್‌ದಸ್ತಿನಿಂದಲೇ ಮಾತನಾಡಬೇಕಾಗಿ ಬರುತ್ತದೆ. ನೀವು ದಯವಿಟ್ಟು ಗಂಭೀರವಾಗಿ ಹೇಳಿದರೆ ಅವರೂ ಸಮಾಧಾನದಿಂದ ಹೇಳುತ್ತಾರೆ ಮತ್ತು ಗಂಭೀರವಾಗಿ ಹೇಳುತ್ತಾರೆ. ಅವರೂ ಒಂದು ಪಾರ್ಟಿ

ಲೀಡರಾಗಿರುತ್ತಾರೆ. ತಾವು ಗಂಭೀರವಾಗಿ ಹೇಳಿದರೆ ಅವರೂ ಗಂಭೀರವಾಗಿ ತಮ್ಮನ್ನು ಕಾಣುತ್ತಾರೆ. ಆದುದರಿಂದ ತಾವು ದಯಮಾಡಿ ಗಂಭೀರವಾಗಿ ಹೇಳಿ ಎಲ್ಲರಿಗೂ ಸಮಾಧಾನವಾಗುವಂತೆ ನೋಡಿಕೊಳ್ಳಿ ಎಂದು ತಮ್ಮಲ್ಲಿ ನಾನು ಕೈಮುಗಿದು ಬೇಡಿಕೊಳ್ಳುತ್ತೇನೆ.

ಅಧ್ಯಕ್ಷರು.—ತಾವು ಏನು ಹೇಳಿದರೂ ಅದನ್ನು ನಾನು ಕೇಳಲೇ ಬೇಕು ಎಂದು ಹೇಳುವುದು ಸರಿಯಲ್ಲ. ತಾವು ಇಲ್ಲಿ ನಡೆದಿರುವ ಸಂಗತಿಗಳನ್ನು ತಿಳಿಯಬೇಕು. ಶ್ರೀಮಾನ್ ಗೋಪಾಲ ಗೌತರು ಇಲ್ಲಿ ನುವಾರು ಹತ್ತು ಹದಿನೈದುಸಾರಿ ಎದ್ದೆದ್ದು ನಿಲ್ಲುತ್ತಿದ್ದರು ಮತ್ತು ಮತ್ತೆ ಮತ್ತೆ ಏನನ್ನೋ ಹೇಳಲು ನಿಂತರು. ಹಾಗೆ ಅವರು ನಿಂತಾಗ ಅವರಿಗೆ ನಾನು ಅವಕಾಶ ಕೊಡುವುದಿಲ್ಲ ಎಂದು ಹೇಳಿದರೂ ನನ್ನ ರೂಲಿಂಗಿಗೇ ವಿರೋಧವಾಗಿ ಅವರು ನಿಲ್ಲುತ್ತಿದ್ದರು.

ಅದರ ನಂತರ ಕೇಳಿದಾಗ ನನಗೆ ಸಮಾಧಾನಕರವಾಗುವ ರೀತಿಯಲ್ಲಿ ಅವರಿಂದ ಹೇಳಿಸಲೇ ಬೇಕು ಎಂದು ಎಲ್ಲಾ ಕೇಳಿದರೆ, ಈ ಸಭೆಗೆ ಗೌರವ ಎಲ್ಲಿ?, ಇದು ಅಧ್ಯಕ್ಷರಿಗೆ ತೋರುವ ಮರ್ಯಾದೆಯೇ? ನಾನು ಕುಳಿತುಕೊಳ್ಳಿ ಎಂದು ಹೇಳಿದರೆ, ತಪ್ಪಾಗುತ್ತದೆ. ಅದಕ್ಕೆ ಮಾನ್ಯ ಸದಸ್ಯರಾದ ಚನ್ನಯ್ಯನವರು ಹೇಳಿದರು, ಮಕ್ಕಳಿಗೆ ಹೇಳಿದ ಹಾಗೆ ಹೇಳುತ್ತಾರೆಂದು.

(Members from the Opposition side were interrupting).

When the Speaker is on his legs no member is entitled to get up and speak. If the Hon'ble Member Sri Channiah persists, I will have to say he will have to withdraw from the House.

Sri S. CHANNIAH.—If the Hon'ble Speaker wants me to get out, I will get out.

Mr. SPEAKER.—When I am on my legs no member is entitled to get out. If this is the sort of situation I am prepared to adjourn the House.

* * * *

Sri H. SIDDAVEERAPPA.—If right action has been taken in the beginning itself, this could have been avoided. If the Leader of the House came forward and told us that this is the reason for which this has happened, we would have certainly obliged. What I can say is, we gave you a bit of our mind when we met in the Business Advisory Committee meeting. There is nothing that prevents me in disclosing what happened there. Then what happened? Nothing was told there. The Leader of the House was there. He could have taken us into confidence and told us the revised programme and the reason for it. Nobody would have disputed it, if it was reasonable. What will the country think of us now? The reasons were not given for revising the programme. If he had done it, we would have acted in a responsible manner and all these troubles and all this discussion could have been well avoided. But what is the position now? No proper reason is given. We feel very frustrated as to what is going to happen here. Some of us here tried to get reasons for curtailing the programme. If convincing reasons were given, there would have been no clash or discussion for so long a period and our precious time would have been utilised for the business of the House. I will have to say that even for to-day and tomorrow this matter shall have to be continued. How far and to what extent the reasons given by the Leader of the House have really convinced the members I do not know. I will place all the records on the Table of the House. Here we have not seen any case where members of the opposition are taken into confidence.

**** Expunged or unrecorded as ordered by the Chair.

† ಶ್ರೀ ಎಸ್. ಶಿವಪ್ಪ.—ಮಾನ್ಯ ಅಧ್ಯಕ್ಷರೇ, ಇಷ್ಟು ಹೊತ್ತು ಚರ್ಚೆಯಾಗಿರತಕ್ಕದ್ದನ್ನು ಇತ್ಯರ್ಥ ಮಾಡದೆ ತಾವು ಬೇರೆ ಕಾರ್ಯಕ್ರಮಗಳಿಗೆ ಹೋಗುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಇವತ್ತಿನ ದಿವಸ ಮೂಲಭೂತವಾದ ಪ್ರಶ್ನೆ ಏನೂ ತೀರ್ಮಾನವಾಗಿಲ್ಲ. ಇವತ್ತಿನ ದಿವಸ ಈ ಸಭೆಯ ಕಾರ್ಯ ಕರಾಪಗಳಲ್ಲಿ ಭಾಗವಹಿಸಬೇಕೇ ಬೇಡವೇ ಎಂಬುದರಲ್ಲಿ ಇನ್ನೂ ಕೂಡ ತೀರ್ಮಾನವನ್ನು ತೆಗೆದು ಕೊಂಡಿಲ್ಲ. ಇದರ ಮೇಲೆ ಇನ್ನೂ ಚರ್ಚೆ ಮುಗಿದಿಲ್ಲ. ನಾಳೆ ಕೂಡ ಇದು ಮುಂದುವರಿಯಬೇಕು. ಅಷ್ಟರವರೆಗೆ ತಾವು ಮತ್ತಾವ ಕಾರ್ಯಕ್ರಮಗಳನ್ನೂ ತೆಗೆದುಕೊಳ್ಳಬಾರದೆಂದು ನನ್ನ ವಿನಯದ ಪ್ರಾರ್ಥನೆ. ಅದಕ್ಕೆ ಮೊದಲು ತಾವು ಇದರ ವಿರುದ್ಧವಾಗಿ ಹೋದರೆ ನಾವು ಕೂಡ ಏನು ತೀರ್ಮಾನ ತೆಗೆದುಕೊಳ್ಳಬೇಕೆಂದು ನೋಡಬೇಕಾಗುತ್ತದೆ. ಈ ವಿಷಯವೇ ಚರ್ಚೆಯಲ್ಲಿರುವಾಗ ಸಭೆಯ ನಿಜವಾದ ಕರ್ಯಕ್ರಮ ಪ್ರಾರಂಭವಾಗಿಲ್ಲ. ಅದಲ್ಲದೆ ಅದರ ಮೊದಲು ಸಭೆಯ ಕಾರ್ಯಕ್ರಮಗಳನ್ನು ಪ್ರಾರಂಭಮಾಡಲಿಕ್ಕೆ ಪ್ರವೇಶ ಮಾಡುವುದಾದರೆ ನಾವು ಈ ಸಭೆಯ ಕಾರ್ಯಕ್ರಮದಲ್ಲಿ ಯಾವ ರೀತಿಯಿಂದ ವರ್ತಿಸಿ ಬಹಿಷ್ಕರಿಸಬೇಕೆಂಬುದನ್ನು ಯೋಚಿಸಬೇಕಾಗಿದೆ. ಸಭಾ ನಾಯಕರು ನಮ್ಮ ಹಕ್ಕುಗಳನ್ನು ಪೊಟಕು ಮಾಡತಕ್ಕಂಥಾದ್ದು ನಮಗೆ ಒಂದು ವಿಪರೀತವಾದ ಆಶ್ಚರ್ಯವನ್ನು ಉಂಟು ಮಾಡಿದೆ. ಮತ್ತು ನಮ್ಮ ದೇಶದ ಆರ್ಥಿಕ ಪರಿಸ್ಥಿತಿ ಎಲ್ಲರಿಗೂ ಆಶ್ಚರ್ಯವನ್ನು ಉಂಟು ಮಾಡತಕ್ಕ ರೀತಿಯಲ್ಲಿ ಇವೆ. ಅದನ್ನು ಅವರು ಒಂದು ಹೇಳಿಕೆ ರೂಪದಲ್ಲಿ ಈ ಸಭೆಯ ಮುಂದೆ ಇಟ್ಟಿದ್ದಾರೆ. ನಿಜವಾಗಿ ನಮ್ಮ ಆರ್ಥಿಕ ಪರಿಸ್ಥಿತಿ ಏನಿದೆ ಎಂಬುದನ್ನು ಹತ್ತಾತ್ತನೆ ತಿಳಿಯುವುದು ನಮ್ಮ ಪ್ರಥಮ ಕರ್ತವ್ಯವಾಗಿದೆ. ಈ ಎರ್ರಾ ದೃಷ್ಟಿಗಳಿಂದ ಈ ಸಭೆ ಬೇರೆ ಯಾವ ಕಾರ್ಯಕ್ರಮಗಳನ್ನೂ ಚರ್ಚೆ ಮಾಡಬಾರದು, ಈ ಚರ್ಚೆ ಮುಂದುವರಿಯಬೇಕು ಇದಾದನಂತರ ಬೇರೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

† **Dr. R. NAGAN GOWDA** (Hospet).—I want to say a few words. We the representatives of 2 crores of people of this State have elected you as the Speaker of this House. We are trying to carry on the discussion as if we are not following any rules or regulations. Democracy can be carried on by discussion and Debate.

[*Sri S. Gopala Gowda stood up*]

I am not yielding. Mr. Gopala Gowda cannot stand up while I do not yield.

Mr. SPEAKER.—Sri R. Nagan Gowda is the oldest Member and the Father of the House.

Dr. R. NAGAN GOWDA.—We are being watched by two crores of people outside this Assembly. We are entrusted with the work of ruling the State. Let us do it in an orderly manner. I am one of the humblest members of the House and I make this suggestion. Whatever we do, even though we are dissatisfied, we have got rules and procedures to follow. Let us observe them. Mysore people are always known for their calmness and for their peace-loving nature and for their reasonableness. Let us not belie that. One more thing : we have elected you as our Speaker and if at any time we feel that you are partial, we have got a procedure by which we could say we do not want you. But we cannot, five or six of us, get up and talk. This is my humblest request to you. Let us try to carry on the proceedings of the House in an orderly manner. I thank you very much.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಏನೋ ಇಲ್ಲಿ ಮಹತ್ತರವಾದ ಅನಾಹುತ ನಡೆಯುತ್ತಿದೆ, ಎಂದು ಮಾನ್ಯ ಮಿತ್ರರಾದ ಆ ಪಕ್ಷದ ಸದಸ್ಯರು ವಿವರಣೆ ಕೊಟ್ಟಿದ್ದಕ್ಕೆ ಬಹಳ ಸಂತೋಷ. ಇಲ್ಲ ನೆರೆದಿರತಕ್ಕವರೂ ಅವರಷ್ಟೇ ಜವಾಬ್ದಾರರು. ಅವರಿಗಿಂತಲೂ ಹೆಚ್ಚಿನ ಜವಾಬ್ದಾರಿ ಜನ ಎಂದು ತಿಳಿಯಪಡಿಸಲು ಇಚ್ಛೆ ಪಡುತ್ತೇನೆ. ನೋವು ಎಲ್ಲಿದೆ ಎನ್ನುವುದನ್ನು ತಾವು ಅರಿತಿದ್ದರೆ ಬಹುಶಃ

ಇಷ್ಟೊಂದು ಗೊಂದಲಕ್ಕೆ ಕಾರಣ ಆಗುತ್ತಾ ಇರಲಿಲ್ಲ. ಇಲ್ಲಿ ಅನೇಕ ಹಿರಿಯರು, ಅನೇಕ ಅನುಭವಿಗಳು ಎಲ್ಲರಿಗೂ ಸಹನೆ ಮೀರಲಕ್ಕೆ ಸ್ಥಿತಿ ಬರಬೇಕಾದರೆ ಏನು ಕಾರಣ ಎಂದು ಪರಿಶೀಲನೆ ಮಾಡಬೇಕು. ತಾವು ಸಕಾಲದಲ್ಲಿ ಮಾಡಬೇಕಾದ ಕರ್ತವ್ಯ ಮಾಡದೇ ಇರತಕ್ಕದ್ದೆ ಕಾರಣ. ಮತ್ತು ಎದುರಿಗೆ ಕುಳಿತಿರತಕ್ಕ ಮಾನ್ಯ ಮಿತ್ರರು ತಮ್ಮ ತಮ್ಮ ಕರ್ತವ್ಯವನ್ನು ಸಮರ್ಪಕವಾಗಿ ಯೋಗ್ಯ ರೀತಿಯಲ್ಲಿ ಜವಾಬ್ದಾರಿಯಿಂದ ಮಾಡಿದ್ದ ಪಕ್ಷದಲ್ಲಿ ತಮಗೂ ಶ್ರಮ ಇರುತ್ತಿರಲಿಲ್ಲ, ನಮಗೂ ಶ್ರಮ ಇರುತ್ತಿರಲಿಲ್ಲ. ಮಾನ್ಯ ಸ್ನೇಹಿತರಾದ ಶ್ರೀಮಾನ್ ನಾಗನಗೌಡರು ಹೇಳಿದಂತೆ 2 ಕೋಟಿ ಜನ ಇಂದು ಏನು ಹೇಳುತ್ತಿದ್ದಾರೆ ಎಂದು ನೋಡುತ್ತಿದ್ದಾರೆ. ನಮ್ಮ ಸಹಪಾಠಿಗಳು ಏನು ಮಾಡುತ್ತಿದ್ದಾರೆ ಈ ಸಭೆಯಲ್ಲಿ 90 ಜನ ಮಾನ್ಯ ಸದಸ್ಯರೂ ಹಿರಿಯರೂ ಕಿರಿಯರೂ ಸೇರಿ ಒಂದೇ ನಮನೆ ಯಾವ ಕಾರಣವೂ ಇಲ್ಲದೆ ವೇಳೆಯನ್ನು ಕಳೆದಿರುವುದು ಇದು ದಡ್ಡತನವಲ್ಲವೇ ? ಇದು ಈ ಗೊಂದಲಕ್ಕೆ ಕಾರಣವಾಯಿತು. ತಮಗೂ ಶ್ರಮ ಕೊಟ್ಟು ನಮಗೂ ಆಗಿರುವ ಸಹನೆಯೂ ಮೀರಿ ಅದಕ್ಕಿಂತಲೂ ಹೆಚ್ಚಾಗಿ ಇಲ್ಲಿಯ ಜನಕ್ಕೂ ಸಹನೆ ಮೀರಿರುತ್ತದೆ. ಸಹನೆಗೂ ಮಿತಿ ಉಂಟು. ಮಿತಿಮೀರಿದ ಕಾಲದಲ್ಲಿ ನಾವು ಏನು ಮಾಡುತ್ತೇವೆ ಎನ್ನುವುದು ಗೊತ್ತಾಗುವುದಿಲ್ಲ. ತಾವು ಹಿರಿಯರು, ಎಲ್ಲವನ್ನೂ ಕೂಡ ಅರಗಿಸಿಕೊಳ್ಳಬಲ್ಲವರು ಎನ್ನುವ ಕಾರಣದಿಂದ ಈ ಸ್ಥಾನಕ್ಕೆ ಕೂರಿಸಿರುವುದು. ತಾವು ಯೋಚನೆ ಮಾಡಿ. ಏನು ಕಾರಣ ಇಷ್ಟು ಸಹನೆ ಮೀರುತ್ತಿದ್ದಾರೆ ಎಂದು. ಇಲ್ಲಿ ಜವಾಬ್ದಾರಿಯಾದಂಥ ಮನುಷ್ಯರೆಲ್ಲರೂ ಕೂಡ ಸಹನೆ ಮೀರಬೇಕಾದರೆ ಕಾರಣ ಏನು ಎನ್ನುವುದನ್ನು ಸಮರ್ಪಕವಾಗಿ ಅರ್ಥಮಾಡಿಕೊಂಡಿಲ್ಲ ಎಂದು ಬಹಳ ವಿನಯದಿಂದ ಅರಿಕೆ ಮಾಡಿಕೊಳ್ಳುತ್ತೇನೆ. ಎದುರಿಗೆ ಕುಳಿತಿರತಕ್ಕ ಸ್ನೇಹಿತರು 'ಅನೆ ಹೋಗುತ್ತಿದೆ, ನಾಯಿ ಬೊಗಳುತ್ತದೆ' ಎನ್ನುವ ಮನೋಭಾವನೆಯಿಂದು ಇರುವುದರಿಂದ ಇಷ್ಟು ಸಹನೆ ಮೀರಲಕ್ಕೆ ಕಾರಣವಾಯಿತು.

ಶ್ರೀ ಎಚ್. ಸಿದ್ದವೀರಪ್ಪ.—ಅವರು ನಗುತ್ತಾ ಇರುವುದನ್ನು ನೋಡಿದರೆ ಏನು ಮಾಡಬೇಕೆಂಬುದು ಗೊತ್ತಾಗುವುದಿಲ್ಲ. It is just like when Rome was burning, Nero was fiddling.

(Sri S. R. Kanthi stood up to speak)

Sri H. M. CHANNABASAPPA.—I am not yielding. The Hon'ble Minister for Parliamentary Affairs cannot rise and talk.

Sri S. R. KANTHI.—I rise to a point of order. ತಾವು ಏನು ಮಾಡುತ್ತಾ ಇದ್ದೀರಿ ಎಂದರೆ ನನ್ನ ಕಡೆ ಬೆಟ್ಟು ಮಾಡಿ ತೋರಿಸುತ್ತಿದ್ದೀರಿ.

Sri H. SIDDAVEERAPPA.—We have medical cases where people have laughed and laughed until the laugh lasted.

Mr. SPEAKER.—Before I give the ruling, I would like to know which rule has been violated. Would the Minister for Parliamentary Affairs enlighten me ?

Sri S. R. KANTHI —The Hon'ble Member can point at the entire Treasury Benches if he wants. But there is no meaning in pointing out to me and my friend Mr. Jatti.

Mr. SPEAKER.—It is more an unkindness than a point of order.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಶ್ರೀಮಾನ್ ಕಂಠಿಯವರು ಪಾರ್ಲಿಮೆಂಟರಿ ಅಫೇರ್ಸ್ ಮಂತ್ರಿಗಳಾಗಿ ಎರಡನೆಯ ಸಾರಿ ಇಂತಹ ಅಪರಾಧ ಮಾಡುತ್ತಾ ಇರುವುದು. ಅವರ ಉದ್ದೇಶ ನೆರವೇರಿಸಿಕೊಳ್ಳಬೇಕಾಗಿದೆ. ಪಾಯಿಂಟ್ ಆಫ್ ಆರ್ಡರ್ ನೆಪ ಹೇಳಿ ಕಳೆದ ಅಧಿವೇಶನದಲ್ಲಿ ಸಭೆಯ ಕಾಲವನ್ನು ಕಳೆದರು. ಇದು ಎರಡನೆಯ ಸಾರಿ ಹೀಗೆ ಮಾಡುತ್ತಾರೆ. ಈ ಸಭೆಯ ಕಾಲವನ್ನು ವ್ಯರ್ಥ ಮಾಡುವುದಕ್ಕೆ ಅವಕಾಶ ಕೊಡಬಾರದು.

ಶ್ರೀ ಎಸ್. ಆರ್. ಕಂಠಿ.—ನನಗೆ ಬುದ್ಧಿ ಹೇಳುವ ಪ್ರಮೇಯ ಇಲ್ಲ. ಪ್ರತಿನಲ ನನಗೆ ಈ ಕಡೆ ಕೈತೋರಿಸುವುದು ಬೇಡ.

Mr. SPEAKER.—The point of order raised by Mr. Hutchmasthy Gowda is as bad an offence as the point made out by saying that the Minister for Parliamentary Affairs has wasted the time of the House. The point is, nobody seems to have understood the real situation. We are going to a certain pitch and everybody says mind is excited. But rules cannot be ignored because mind is excited. I am trying to give accomodation as much as possible. Do they feel half a dozen people rising simultaneously and insisting on point of order amounts to showing any respect to the Speaker ? I do not mind it individually. I do not want respect. But when I call the House to order, members one after another go on speaking and still they think they are the persons injured. There I fail to understand. Let him think it over.

6-00 P.M.

ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ಪಾಮಿ, ಪಾರ್ಲಮೆಂಟರಿ ಪದ್ಧತಿಗೆ ಅನುಸಾರವಾಗಿ ಈ ಸಭೆಯಲ್ಲಿ ನಾವು ಪ್ರಶ್ನೆ ಎತ್ತಿದ್ದೇವೆ. ಆದರೆ ಸರಕಾರ ಯಾವ ಮಾರ್ಗದಿಂದ ಹೋಗುತ್ತಿದೆ ಎಂಬುದು ಇದರಿಂದ ಗೊತ್ತಾಗುತ್ತದೆ. ನಮಗೆ ಅವರು ಪಾಠ ಕಲಿಸಬೇಕಾಗಿಲ್ಲ. ಇದು ಸ್ಕೂಲು ಅಲ್ಲ. ಸ್ಕೂಲಿಗೆ ಹೋಗಿ ಅವರೇ ಬೇಕಾದರೆ ಪಾರ್ಲಮೆಂಟರಿ ಪದ್ಧತಿಯನ್ನು ಕಲಿತುಕೊಂಡು ಬರಬೇಕು ಎಂದು ಹೇಳುತ್ತೇನೆ. ಇದು ಮೂಲಭೂತವಾದ ಪ್ರಶ್ನೆ ಇರುವುದರಿಂದ ನಾನು ಒಂದು ಅರಿಕೆ ಮಾಡಿಕೊಳ್ಳುತ್ತೇನೆ. ಸರಕಾರಕ್ಕೆ ಏನು ಅಡಚಣೆ ಇದೆ ಎಂಬುದು ನಿಕೃಷ್ಟವಾಗಿ ಕಂಡುಬರುತ್ತಿದೆ. ಬೆಳಿಗ್ಗೆಯಿಂದ ಈ ಸಭೆಯಲ್ಲಿ ಇಂದು ಈ ವಿಷಯ ಚರ್ಚೆಯಾಗುತ್ತಿರುವುದರಿಂದ ರಾಜ್ಯದ ಬೊಕ್ಕಸದ ಹಣ ಲಕ್ಷಾಂತರ ರೂಪಾಯಿ ಖರ್ಚಾಗುತ್ತಿದೆ. ಮಾನ್ಯ ಮುಖ್ಯ ಮಂತ್ರಿಗಳು ಪ್ರಾರಂಭದಲ್ಲಿಯೇ ವಿವರಣೆ ಹೇಳಿದ್ದರೆ ನಾವು ಒಪ್ಪುತ್ತಿದ್ದೆವು ಅಥವಾ ಬಿಡುತ್ತಿದ್ದೆವು. ವಿಷಯ ತಿಳಿದುಕೊಳ್ಳದೆ ಬೊಗಳುತ್ತಾರೆ. ಬೊಗಳಲಿ ಅದರೆ ಅಧಿಕಾರ ನನ್ನದು ಇದೆ ಎಂಬ ಮಾತು ಹೇಳುವುದು ಅಹಂಭಾವದಿಂದ ಕೂಡಿದೆ. ಮೊದಲೇ ಹೇಳಿದ್ದರೆ ಇಷ್ಟು ಅಶಾಂತಿ ತಪ್ಪುತ್ತಿತ್ತು. ಅವರು ಹೇಳಿದರು ನನಗೆ ಆಪ್ಪಣೆ ಕೊಡಲಿಲ್ಲ ಎಂದು, ಅವರು ಕೇಳಿಕೊಂಡಿದ್ದರೆ ಆಪ್ಪಣೆ ಕೊಡುತ್ತಿರ ಲಿಲ್ಲವೇ ?

ಶ್ರೀ ಆರ್. ಎಂ. ಪಾಟೀಲ್.—ಅಹಂಭಾವ ಅನ್-ಪಾರ್ಲಮೆಂಟರಿ ಶಬ್ದ ಇದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ಪಾರ್ಲಮೆಂಟರಿ ಶಬ್ದ ಇದೆ.

ಶ್ರೀ ಎಸ್. ನಿಜಲಿಂಗಪ್ಪ.—ಮಂದಮತಿ ನಿಂದಿನಲು ತಾಳಿಕೊಂಡವ ಜಾಣ ಎಂದು ಹೇಳಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಪ್ರಶ್ನೆ ಅಲ್ಲ. ಸಭೆಯ ಕಾರ್ಯಕಲಾಪವನ್ನು ಐದು ದಿವಸಗಳ ಮಟ್ಟಿಗೆ ಗೊತ್ತುಮಾಡಿರುವುದಕ್ಕೆ ಕಾರಣವನ್ನು ಜವಾಬ್ದಾರಿಯಿಂದ ಹೇಳಬೇಕಾಗಿತ್ತು. ಇದು ಜವಾಬ್ದಾರಿ ವಿಷಯ. ನಗುವ ವಿಷಯವಲ್ಲ. ನಗುವುದನ್ನು ನೋಡಿದರೆ ನಮಗೆ ಸಂಕಟ ವಾಗುತ್ತದೆ. ಇಂಥ ವಿಷಯದ ಬಗ್ಗೆ ನಗುತ್ತಾ ಇರುವುದು ಅಧಿಕಾರದಲ್ಲಿರತಕ್ಕಂಥವರಿಗೆ ಯೋಗ್ಯ ವಲ್ಲ. ಇಂದು ದೇಶದಲ್ಲಿ ಹಣಕಾಸಿನ ಪರಿಸ್ಥಿತಿ ಏನಿದೆ ಎಂಬುದನ್ನು ಪರಿಶೀಲಿಸಬೇಕಾದುದು ಅತ್ಯಗತ್ಯ. ಬಜೆಟ್ ರಿವೈಜ್ ಮಾಡಬೇಕಾದರೆ ಅದಕ್ಕೆ ಕ್ಲೊಯರ್ ಕಟ್ ರೂಲ್ಸ್ ಇವೆ, ಅದಕ್ಕೆ ಪ್ರೊಸೀಜರ್ ಇದೆ. ಅದನ್ನು ಅನುಸರಿಸಬೇಕಾಗುತ್ತದೆ. ಹಾಗೆ ಮಾಡಿದ್ದಾರೆಯೇ ಎಂಬುದನ್ನು ನೋಡಬೇಕು. ಇದು ಮೂಲಭೂತವಾದ ಪ್ರಶ್ನೆ ಇರುವುದರಿಂದ ನಾನು ತಮಗೆ ಕಳಕಳಿಯಿಂದ ಅರಿಕೆ ಮಾಡಿಕೊಳ್ಳುತ್ತೇನೆ. ತಾವು ಇದನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಅವರು ಕೊಟ್ಟ ವಿವರ ಏನಿದೆ, ಅಡಚಣೆ ಏನು ಇತ್ತು, ಎಂಬುದನ್ನು ತಿಳಿದುಕೊಂಡು ಸರಿಪಡಿಸಬೇಕು ಎಂಬುದು ನನ ಸೂಚನೆ.

Mr. SPEAKER.—Now I will not allow anybody to talk further on this matter. I am calling Prof. Srikantaiah to tell me whether he does not want to put his Calling Attention motion.

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಈ ಸಭೆಯಲ್ಲಿ ಎಲ್ಲ ಸದಸ್ಯರಿಗೂ ಮಾತನಾಡುವು ದಕ್ಕೆ ಅವಕಾಶವಿದೆ. ಆದರೆ ಕೆಲವು ಸದಸ್ಯರು ಹೇಳಿದ್ದನ್ನು ಕೇಳಿ ಸಿಟ್ಟಾಗುತ್ತೀರಿ. ಕೆಲವರು ಹೇಳಿದ್ದನ್ನು ಸಮಾಧಾನದಿಂದ ಕೇಳುತ್ತೀರಿ, ಇದರ ಅರ್ಥ ನಮಗೆ ಆಗುವುದಿಲ್ಲ. ನಾನು ನಪ್ರತೆ ಯಿಂದ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಯಾವದೇ ಪಕ್ಷದ ಸದಸ್ಯರಾಗಿದ್ದರೂ ಒಂದೇ ರೀತಿಯಾಗಿ ತಿಳಿದುಕೊಳ್ಳಬೇಕು. ಒಬ್ಬರ ಬಗ್ಗೆ ಸುಮ್ಮನೆ ಇರುವುದು ಇನ್ನೊಬ್ಬರ ಬಗ್ಗೆ ಅನಮಾಧಾನ ಪಡು ವುದು ಸರಿಯಲ್ಲ ಎಂದು ಅನಿಸುತ್ತದೆ.

ಅಧ್ಯಕ್ಷರು.—ಇಂಥಿಂಥವರಿಗೆ ಅನ್ಯಾಯವಾಗಿದೆ ಎಂಬುದಕ್ಕೆ ಹೆಸರು ಬರೆದು ನನಗೆ ಕೊಡ ಬೇಕು. ನಾಳೆ ಈ ವಿಷಯ ಕೇಳುತ್ತೇನೆ. ಉದಾಹರಣೆ ಕೊಡದೆ ಸೂಚಿಸಿದ್ದೀರಿ. ಆದುದರಿಂದ ದಯವಿಟ್ಟು ಇದನ್ನು ಬರೆದು ಕೊಡಬೇಕು.

ಶ್ರೀ ಪಿ. ವೆಂಕಟಗಿರಿಯಪ್ಪ.—ಗೋಪಾಲಗೌಡರಿಗೆ ಅನ್ಯಾಯವಾಗಿದೆ ಎಂದು ಹೇಳಿದ್ದೇನೆ

ಅಧ್ಯಕ್ಷರು.—ಶ್ರೀ ಚನ್ನಬಸಪ್ಪನವರಿಗೆ, ಸಿದ್ದವೀರಪ್ಪನವರಿಗೆ ಮಾತನಾಡಲಿಕ್ಕೆ ಅವಕಾಶ ಕೊಡಲಿಲ್ಲವೇ ? ಸಭೆಯಲ್ಲಿ ಮಾನ್ಯ ಸದಸ್ಯರು ಈ ರೀತಿ ಮಾತನಾಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ವಿವರಣೆ ಕೇಳಬೇಕೆಂದು ಇದ್ದೆವು. ಮಾನ್ಯ ಮುಖ್ಯ ಮಂತ್ರಿಗಳು ಭಾಷಣ ಮಾಡಿದರು.

ಒಬ್ಬ ಮಾನ್ಯ ಸದಸ್ಯರು.—ಆರು ಗಂಟೆಗೆ ಆಗಿ ಹೋಯಿತು. ಇಂದು ಸಭೆ ಅಡ್ಜರ್ನ್ ಮಾಡು ವುದು ಒಳ್ಳೆಯದು.

ಅಧ್ಯಕ್ಷರು.—ಶ್ರೀ ಶಿವಪ್ಪನವರು ಒಂದು ಸೂಚನೆ ಕೊಟ್ಟರು. ಅದು ತೀರ್ಮಾನವಾಗು ವವರೆಗೆ ಬೇರೆ ಯಾವ ಕಾರ್ಯಕ್ರಮವನ್ನೂ ತೆಗೆದುಕೊಳ್ಳಕೂಡದು ಎಂದು ಹೇಳಿದರು. ಕಾಲಿಂಗ್ ಅಟೆನ್‌ಷನ್ ನೋಟೀಸ್ ತೆಗೆದುಕೊಳ್ಳುವುದೂ ಬೇಡ ಲೇಯಿಂಗ್ ಆಫ್ ಪೇಪರ್ಸ್ ತೆಗೆದುಕೊಳ್ಳು ವುದೂ ಬೇಡ ಎಂದರೆ, ಸಭೆಯವರು ಹಾಗೆ ಹೇಳಲಿ. ಚರ್ಚಾಸ್ಪದವಾದ ವಿಷಯವನ್ನು ನಾಳೆಗೆ ಹಾಕುತ್ತೇನೆ ಎಂದು ನಾನು ಹೇಳಿದೆ. ಇತರ ಕಾರ್ಯಕ್ರಮವನ್ನೂ ತೆಗೆದುಕೊಳ್ಳಕೂಡದು ಎಂದು ಸಭೆ ಅಭಿಪ್ರಾಯ ಪಡುವುದಾದರೆ ಹಾಗೆ ಹೇಳಲಿ. ನಾನು ಸಭೆಯ ಅಭಿಪ್ರಾಯ ತೆಗೆದುಕೊಳ್ಳುವುದಕ್ಕೆ ಸಿದ್ಧವಾಗಿದ್ದೇನೆ. ನಾವು ತೀರ್ಮಾನ ಮಾಡಿದ್ದೇವೆ ಎಂದು ಹೇಳಿದರೆ, ನೀವು ಹೊರೆಗೆ ಮಾಡಿದಂಥ ತೀರ್ಮಾನ ನನ್ನನ್ನು ಬಂಧಿಸತಕ್ಕದಲ್ಲ. ಸಭೆ ಹೇಳಿದುದನ್ನು ಮಾಡುವುದಕ್ಕೆ ನಾನು ಸಿದ್ಧವಾಗಿ ದ್ದೇನೆ. ಕಾಲಿಂಗ್ ಅಟೆನ್‌ಷನ್ ನೋಟೀಸ್ ಇದೆ. ಅದು ಬೇಕೇ ಬೇಡವೇ ಎಂದು ಸಭೆಯವರು ಹೇಳಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಇದೇ ವಿಷಯವನ್ನು ನಾಳೆ ಚರ್ಚೆಗೆ ತೆಗೆದುಕೊಳ್ಳುತ್ತೇ ವೆಂದು ಹೇಳಿದಿರಿ. ಆದುದರಿಂದ ಈಗ ಯಾವ ವಿಷಯವು ಚರ್ಚೆಯಾಗದೆ ಎಲ್ಲವನ್ನೂ ನಾಳೆಗೆ ಮುಂದುವರಿಸಬೇಕು ಎಂದು ಹೇಳುತ್ತೇನೆ, ಸ್ವಾಮಿ.

ಅಧ್ಯಕ್ಷರು.—ಕಾಲಿಂಗ್ ಅಟೆನ್‌ಷನ್ ನೋಟೀಸ್, ಲೇಯಿಂಗ್ ಆಫ್ ಪೇಪರ್ಸ್ ಈ ಕಾರ್ಯ ಕ್ರಮವನ್ನು ಸಭೆಯವರು ಈಗ ಮಾಡುವುದು ಬೇಡವೆಂದರೆ ನಾನು ಆ ಪ್ರಕಾರ ನಡೆದುಕೊಳ್ಳುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ ಲೇಯಿಂಗ್ ಆಫ್ ಪೇಪರ್ಸ್, ಸರ್ಕಾರದವರು ಮಾಡುವ ಕೆಲಸ. ಕಾಗದಪತ್ರಗಳನ್ನು ಸಭೆಯ ಮುಂದೆ ಇಡುವುದಕ್ಕೆ ಸರ್ಕಾರದವರು ಸಿದ್ಧವಾಗಿದ್ದಾರೆ. ಇನ್ನೊಂದು ವಿಷಯವನ್ನು ಅಪ್ಪಣೆಕೊಡಿಸಿದಿರಿ, ಕಾಲಿಂಗ್ ಅಟೆನ್‌ಷನ್ ಮೋಷನ್ ವಿಚಾರ. ಕಾರ್ಯ ಕ್ರಮ ಪಟ್ಟಿಯಲ್ಲಿ ಅದು ಅಡಕವಾಗಿದೆ. ತಾವು ಮಾನ್ಯಸದಸ್ಯರನ್ನು ಕರೆದು, ಅವರು ಅಪೇಕ್ಷೆಪಟ್ಟರೆ ಆ ಸೂಚನೆಯನ್ನು ಸಭೆಯ ಮುಂದೆ ಇಡಬಹುದು. ಅವರು ಅಪೇಕ್ಷೆಪಡದೆ ಇದ್ದರೆ, ಅದರ ಅರ್ಥ ವೇನೆಂದರೆ ಕಾಲಿಂಗ್ ಅಟೆನ್‌ಷನ್ ಮೋಷನ್ ಸಭೆಯ ಮುಂದೆ ಇಡುವುದಕ್ಕೆ ಅವರಿಗೆ ಇಷ್ಟವಿಲ್ಲ ಎಂದಾಗುತ್ತದೆ. ಇಷ್ಟವಿಲ್ಲದಿದ್ದರೂ ಒಂದೊಂದು ಕಾರ್ಯಕ್ರಮದ ಮೇಲೂ ಈ ಸಭೆಯ ಅಭಿಮತ ವನ್ನು ಪಡೆದುಕೊಂಡು ಹೋಗುವುದು ಮೊದಲಿನಿಂದಲೂ ಅಂಥ ಕ್ರಮ ನಡೆದು ಬಂದಿಲ್ಲ. ಯಾರಾ ದರೂ ಇಂಥದನ್ನು ಇಡುವುದಕ್ಕೆ ಅಥವಾ ಇಂಥದನ್ನು ಪ್ರಸ್ತಾಪ ಮಾಡುವುದಕ್ಕೆ ಕೂಡದು ಎಂದು ಒಂದು ಸೂಚನೆಯನ್ನು ತಂದವೇಳೆಯಲ್ಲಿ ಆ ಒಂದು ಸೂಚನೆಯ ಮೇರೆ ತಾವು ಸಭೆಯ ಅಭಿಮತ ವನ್ನು ಪಡೆಯಬೇಕಾಗುತ್ತದೆ. ಈಗ ಕಾಲಿಂಗ್ ಅಟೆನ್‌ಷನ್ ಮೋಷನ್ ತೆಗೆದುಕೊಳ್ಳಕೂಡದು ಎಂದು ಯಾರೂ ಒಂದು ಸೂಚನೆಯನ್ನು ತಂದಹಾಗೆ ಕಾಣುವುದಿಲ್ಲ. ತಾವು ಅನುಸರಿಸಿದಂಥ ಮೊದಲನೆಯ ಕ್ರಮ, ಮಾನ್ಯ ಸದಸ್ಯರು ಕಾಲಿಂಗ್ ಅಟೆನ್‌ಷನ್ ಸೂಚನೆಯನ್ನು ಸಭೆಯಮುಂದೆ ಇಡಬೇಕೆಂದು ಕೇಳಿದ್ದೀರಿ. ಅದನ್ನು ಸಭೆಯಮುಂದೆ ಇಡುವುದು ಅಥವಾ ಬಿಡುವುದು ಆ ಮಾನ್ಯ ಸದಸ್ಯರಿಗೇ ಸೇರಿದ್ದು. ಈ ಕ್ರಮ ಸರಿಹೋಗುತ್ತದೆ ಎಂದು ನನ್ನ ಅಭಿಪ್ರಾಯ ಸ್ವಾಮಿ.

ಶ್ರೀ ಎಸ್. ಶಿವಪ್ಪ.—ನಾನು ಮಾಡಿದ ಸೂಚನೆಯು ಮೇಲಿನ ಚರ್ಚೆಯನ್ನು ನಾಳೆಗೆ ಮುಂದುವರಿಸುವುದಕ್ಕೆ ಆಗಲೇ ತಾವು ಒಪ್ಪಿಗೆಕೊಟ್ಟಿರಿ. ಈ ವಿಷಯದಮೇಲೆ ಚರ್ಚೆ ಮುಗಿಯದ ಹೊರತು ಬೇರೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬಾರದು. ಯಾವಾಗ ಈ ವಿಷಯದಮೇರೆ ಚರ್ಚೆಯನ್ನು ಮುಂದುವರಿಸುವುದಕ್ಕೆ ಒಪ್ಪಿಗೆಯನ್ನು ಕೊಟ್ಟಿದ್ದೀರೋ ಆಗ ಬೇರೆ ಕಾರ್ಯಕ್ರಮ ಬರತಕ್ಕ ಪರಿಸ್ಥಿತಿ ಇಲ್ಲ. ಚರ್ಚೆ ಮುಗಿಯುವವರೆಗೂ ಇತರ ಕಾರ್ಯಕ್ರಮವನ್ನು ತೆಗೆದುಕೊಳ್ಳಬಾರದು. ಒಂದು ವೇಳೆ ಬೇರೆ ಕಾರ್ಯಕ್ರಮ ತೆಗೆದುಕೊಂಡರೆ ನಾವು ಬೇರೆ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಗೊಂದಲಕ್ಕೆ ಅವಕಾಶಕೊಡದೆ ಚರ್ಚೆಯನ್ನು ಮುಂದುವರಿಸಬೇಕು. ಇದನ್ನುಬಿಟ್ಟು ಕಾಗದ ಪತ್ರಗಳ ಮಂಡನೆಯಾಗಲೀ, ಕಾಲಿಂಗ್ ಅಟೆನ್‌ಷನ್ ಮೋಷನ್ ಆಗಲೀ, ಯಾವುದೇ ಕಾರ್ಯಕ್ರಮ ವಾಗಲೀ ಈ ಚರ್ಚೆ ಮುಗಿದಮೇಲೆಯೇ ಪ್ರಾರಂಭವಾಗಬೇಕು. ಅದಕ್ಕಿಂತ ಮುಂಚೆ ಬರುವುದಕ್ಕೆ ಅವಕಾಶ ಕೊಡಬಾರದು ಎಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ ಮತ್ತು ತಾವು ಬೇರೆ ರೀತಿ ಮಾಡಬಾರದೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್. ಗೋಪಾಲ ಗೌಡ.—ತಾವು ಚರ್ಚೆ ನಡೆಯುತ್ತಿದ್ದ ಕಾಲದಲ್ಲಿ.....

ಅಧ್ಯಕ್ಷರು.—ಯಾವ ಚರ್ಚೆ ನಡೆಯುತ್ತಿದ್ದಾಗ.....

ಶ್ರೀ ಎಸ್. ಗೋಪಾಲಗೌಡ.—ನಭೆಯಲ್ಲಿ ಯಾವುದೋ ಒಂದು ವಿಷಯ ಚರ್ಚೆಯಾಗುತ್ತಿದ್ದಾಗ.....

ಅಧ್ಯಕ್ಷರು.—ಯಾವ ಮೋಷನ್ ಇತ್ತು, ಯಾವ ಕ್ವೆಶ್ಚನ್ ಇತ್ತು.....

ಶ್ರೀ ಎಸ್. ಗೋಪಾಲಗೌಡ.—ನಭೆ ಚರ್ಚೆ ಮಾಡುತ್ತಿದ್ದಾಗ ತಾವು ಏನುಮಾಡಿದಿರಿ ಎಂದರೆ, ಉಪಾಯವಾಗಿ ಸಂತಾಪಸೂಚಕ ನಿರ್ಣಯವನ್ನು ಎದ್ದು ಓದಿಬಿಟ್ಟಿರಿ. ಯಾರೋ ಮೃತಪಟ್ಟಿದ್ದರ ಬಗ್ಗೆ ಹೇಳಿದಿರಿ. ಅದನ್ನು ವಿರೋಧ ಮಾಡಬಾರದೆಂದು ಸೌಜನ್ಯದಿಂದ ಹಾಗೆಯೇ ಇದ್ದೆ. ಮೌನ ಅಚರಣೆಯೂ ಆಯಿತು. ತಕ್ಷಣವೇ ತಾವೇ ನಭೆಯನ್ನೂ ಕೇಳಲಿಲ್ಲ, ಗವರ್ನರ್ ಕಳಿಸಿದ್ದಾರೆಂದು ಒಂದು ಕಾಗದವನ್ನು ಓದಿಬಿಟ್ಟಿರಿ.

ಅಧ್ಯಕ್ಷರು.—ಅದನ್ನು ಓದಬೇಕೇ ಎಂದು ತಮ್ಮನ್ನು ಕೇಳಬೇಕಾಗಿತ್ತೇ?

ಶ್ರೀ ಎಸ್. ಗೋಪಾಲಗೌಡ.—ಮೂರನೆಯದಾಗಿ ಕಾಲಿಂಗ್ ಅಟೆನ್‌ಷನ್ ಮೋಷನ್ ತೆಗೆದು ಕೊಳ್ಳುತ್ತೇನೆಂದು ಹೇಳಿದಿರಿ. 'ನಭೆಯ ಅಭಿಪ್ರಾಯವನ್ನು ಬಿಟ್ಟು ನೀವು ಏನು ಹೇಳಿದರೆ ಅದರಂತೆ ನಡೆಯಲೇನು' ಎಂದು ಕೇಳಿದಿರಿ. ನಾನು ನಭೆಯಲ್ಲಿ ಇಲ್ಲವೋ? ನಾನು ಇಲ್ಲಿ ಕುಳಿತು ಕೊಂಡಿಲ್ಲವೋ.....

ಅಧ್ಯಕ್ಷರು.—ಇನ್ನು ಮುಂದೆ ಏನು ಮಾಡಬೇಕಾದರೂ ನಿಮ್ಮನ್ನು ಕೇಳಬೇಕು. This is what is being supported by others-shall I take it as the opinion of the House?

ಶ್ರೀ ಎಸ್. ಗೋಪಾಲಗೌಡ.—ಅದಲ್ಲ ಪ್ರಶ್ನೆ. ತಾವು ನಭೆಯ ಅಭಿಪ್ರಾಯದಂತೆ ನಾನು ಹೋಗುತ್ತೇನೆ ಎಂದು ಹೇಳಿ 'ನೀನು 15 ನಲ ನಿಂತುಕೊಂಡೆ' ಎಂದು ಹೇಳಿದಿರಲ್ಲ. ನಭೆಯ ಅಭಿಪ್ರಾಯವನ್ನು ತೆಗೆದುಕೊಂಡಿದ್ದೀರಿ ಅಥವಾ ಇಲ್ಲ ಎನ್ನುವುದು ರಿಕಾರ್ಡಿನಲ್ಲಿದೆ. ಹಾಗಾದರೆ ಈ ಚರ್ಚೆಯನ್ನು ಮುಂದಕ್ಕೆ ಹಾಕಿ ಮುಂದಿನ ವಿಷಯವನ್ನು ತೆಗೆದುಕೊಳ್ಳೋಣವೇ ಎಂದು ಕೇಳಿದ್ದೀರಾ? ಯಾರು ಅಸ್ಯೂಮ್ ಮಾಡುವುದಕ್ಕೆ ತಮಗೆ ಅಧಿಕಾರ ಕೊಡುತ್ತಾರೆ? ಅದನ್ನು ನಾನು ಕೇಳಬೇಕೆಂದು ಇದ್ದೆ. ಇನ್ನೂ ನಾನು ಕೇಳುವುದು ಬಹಳವಿದೆ. ನನ್ನ ಅಜರ್ನ್‌ಮೆಂಟ್ ಮೋಷನ್ ಇದೆ. ಪ್ರಿವಿಲೆಜ್ ಮೋಷನ್ ಇದೆ, ವಿಷಯ ಇನ್ನೂ ಗಂಭೀರವಾಗಿದೆ. ಸಮಾಧಾನ ಕರವಾದ ಉತ್ತರ ತಮ್ಮಿಂದಲೂ ಬಂದಿಲ್ಲ, ಸಭಾ ನಾಯಕರಿಂದಲೂ ಬಂದಿಲ್ಲ. ಆದುದರಿಂದ ತಾವು ಈ ವಿಷಯವನ್ನು ಇಷ್ಟು ಲಘುವಾಗಿ ಬದಿಗೊತ್ತುವುದು ಸಾಧ್ಯವಿಲ್ಲ ಎಂದು ನಾನು ತಮ್ಮಲ್ಲಿ ಬಹಳ ಗಂಭೀರವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Mr. SPEAKER.—I am not allowing further discussion. I must draw the line somewhere.

ಶ್ರೀ ಎಚ್. ಬಿ. ಜ್ವಾಲನಯ್ಯ.—ತಾವು ನಾಳೆಗೆ ಈ ಚರ್ಚೆಯನ್ನು ಮುಂದುವರಿಸುವುದಕ್ಕೆ ಒಪ್ಪಿದ್ದೀರಿ ಸ್ವಾಮೀ.

Mr. SPEAKER.—Order, Order.

ಶ್ರೀ ಬಿ. ಭಾನ್ಯರ ಶೆಟ್ಟಿ (ಕೌಪು).—ಸಮಯ ಕೂಡ ಒಳ್ಳೆಯದಲ್ಲ. ಆದುದರಿಂದ ಈಗ ಸಭೆಯನ್ನು ಮುಂದಕ್ಕೆ ಹಾಕುವುದು ಒಳ್ಳೆಯದು ಎಂದು ಕಾಣುತ್ತದೆ ಸ್ವಾಮಿ.

Sri H. SIDDAVEERAPPA.—I may bring to your notice that when the discussion commenced, the sense of the House was not taken. When Mr. Sivappa gave notice...

Mr. SPEAKER.—Was there a motion before the House? I allowed the member to speak so that he should not feel that he had no chance of expression. Was there a motion ?

Sri H. SIDDAVEERAPPA.—There was no motion. What was a discussion was a prelude to a motion. I respectfully submit that if other subjects are allowed to be taken without concluding the subject matter that is under discussion right from this morning, it may lead to further complication. Therefore, I would beg of the friends on the other side not to insist. Let us continue this discussion tomorrow.

Mr. SPEAKER.—Why should not the whips meet? Why do whips exist at all? Why should not members meet outside and tell me something agreed? All these appeals are made on the floor of the House and the Speaker is found fault with. What is the point I said? The discussion may take place tomorrow on this motion! I did not say on this motion. All that I wanted to say has gone into the records. To see that members may not feel hurt, if they wanted to say anything, I will give an opportunity. But it is not a vested right that I have denied them. If this is the position, I really cannot understand. If members are to presume that there is a motion and that motion is going to be adjourned— please disillusion yourselves of that. There is no motion before the House. I want to make it clear because it was said there will be some discussion tomorrow on a particular point. As regards the items on the agenda, placing the papers on the Table of the House—whether that should or should not be done, should I take it from one or the other members? Though there are so many members here, I cannot take the opinion of one particular member. The Hon'ble Member says I am ignoring him. The House fully knows whether I am ignoring him or giving him more opportunities. No member should feel that he is denied. I cannot do anything without the direction of the House. What the Hon. Minister for Health said was in passing—he should kindly remember. I have to ascertain the sense of the House whether the House would like to sit and whether this work should not be done. But if Hon'ble Members do not want to participate, I cannot help.

Sri H. M. CHANNABASAPPA.—Sir, somehow, we have started at a bad hour. That apart the Hon'ble Chief Minister made a statement at the tail end of the day and that has been the trouble. Many of us—most of us are anxious to make some remarks on the statement and at least satisfy ourselves that the position is quite satisfactory. When the House s seized of the statement, it would not be fair to deny us the opporunity

(SRI H. M. CHANNABASAPPA)

of making remarks on the statement of the Chief Minister. Therefore, I beg of you and of the House that since it is already 6-30 P.M., let the discussion on the statement of the Chief Minister made here in regard to the financial position and the causes that led to the curtailment of the period of the session—please allow us to complete discussion and then all the matters on the agenda could be taken up. This is my humble submission made not only for myself, but on behalf of all the sections of the House and I hope all of them agree. Kindly bear with me and let the discussion go on and then we shall proceed further.

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ಮಾನ್ಯ ಚನ್ನಬಸಪ್ಪನವರು ಈಗ ತಮಗೆ ಒಂದು ವಿನಂತಿಯನ್ನು ಮಾಡಿಕೊಂಡರು. ಮಾನ್ಯ ಮುಖ್ಯ ಮುಂತ್ರಿಗಳು ಈ ಸಭೆಯಲ್ಲಿ ಕೊಟ್ಟ ಹೇಳಿಕೆಯಮೇಲೆ ವಿಶದವಾಗಿ ಚರ್ಚೆಗೆ ಅವಕಾಶ ಕೊಡಬೇಕೆಂದು ಕೇಳಿದರು. ನನಗೆ ತಿಳಿದಹಾಗೆ ಇಂದು ಮೊದಲು ಪ್ರಶ್ನೋತ್ತರಗಳ ಕಾಲ ಇರಬೇಕೇ ಬೇಡವೇ, ಅದಕ್ಕೆ ಮುಂಚೆಯೇ ವಿರೋಧ ಪಕ್ಷದವರು ಹೇಳಿದ ವಿಚಾರ ಚರ್ಚೆಯಾಗಬೇಕೇ ಬೇಡವೇ ಎಂಬುದು ಸಭೆಯ ಮುಂದೆ ಬಂದು ಚರ್ಚೆಯಾಯಿತು. ಕಾರ್ಯಕಲಾಪಗಳನ್ನು ತಿದ್ದುಪಡಿ ಮಾಡುವುದಕ್ಕೆ ಏನು ಕಾರಣವಿತ್ತೆಂಬುದನ್ನು ಅಧ್ಯಕ್ಷರು ಈ ಸಭೆಗೆ ತಿಳಿಸಿದ್ದಾರೆ. ಅವರು ತಿಳಿಸಿದಂತೆ ಈ ಸಭೆಯ ಕಾರ್ಯಕ್ರಮ ಪಟ್ಟಿಯನ್ನು ಗೊತ್ತುಮಾಡುವುದು ಅಥವಾ ತಿದ್ದುಪಡಿ ಮಾಡುವುದು ಅಧ್ಯಕ್ಷರ ಅಧಿಕಾರಕ್ಕೆ ಒಳಪಟ್ಟ ವಿಷಯವಾಗಿದೆ. ತಾವು ಸರಕಾರದ ಪರವಾಗಿ ಸಭಾನಾಯಕರನ್ನು ಅಂದರೆ, ಮುಖ್ಯಮಂತ್ರಿಗಳನ್ನು ವಿಚಾರ ಮಾಡಿ ಅವರ ಜೊತೆಯಲ್ಲಿ ಚರ್ಚೆಮಾಡಿ ಒಂದು ತೀರ್ಮಾನಕ್ಕೆ ಬಂದು ಯಾವ ಕಾರಣದಿಂದ ತಾವು ಕಾರ್ಯಕ್ರಮವನ್ನು ತಿದ್ದುಪಡಿ ಮಾಡಿದಿರಿ ಎಂಬುದನ್ನು ಸಭೆಗೆ ತಿಳಿಸಿದ್ದೀರಿ. ಅದರ ಮೇಲೂ ಕೂಡ ಸಭಾಸದರು ಕಾರ್ಯಕಲಾಪಗಳನ್ನು ತಿದ್ದುಪಡಿ ಮಾಡುವುದಕ್ಕೆ ಅಂಥ ಬಲವಾದ ಕಾರಣವೇನಿತ್ತು ಎಂಬುದನ್ನು ಮುಖ್ಯ ಮಂತ್ರಿಗಳು ತಿಳಿಸಬೇಕೆಂದು ಕೇಳಿದರು. ಅದರಂತೆ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಹೇಳಿಕೆಯನ್ನು ಕೊಟ್ಟಿದ್ದಾರೆ. ಇರತಕ್ಕ ನಿಯಮಗಳ ಪ್ರಕಾರ ನೋಡುವುದಾದರೆ, ಕಾರ್ಯಕಲಾಪಗಳ ವಿಚಾರ ಇಲ್ಲಿಗೆ ಪರ್ಯವಸಾನವಾಗಬೇಕು. ಆದರೆ ಮಾನ್ಯ ಚನ್ನಬಸಪ್ಪನವರು ಹಾಗೂ ಸಿದ್ಧವೀರಪ್ಪನವರು ಮುಖ್ಯ ಮಂತ್ರಿಗಳು ಕೊಟ್ಟ ಹೇಳಿಕೆ ಬಹಳ ಮುಖ್ಯವಾದುದು, ದೇಶದ ಹಣಕಾಸಿನ ವಿಚಾರಕ್ಕೆ ಸಂಬಂಧಪಟ್ಟಿರುವುದು, ಅದರ ವಿಚಾರವಾಗಿ ಚರ್ಚೆಯಾಗಬೇಕು ಎಂದು ಕೇಳುವುದು ನ್ಯಾಯವಾಗಿದೆ, ಸ್ವಾಭಾವಿಕವಾಗಿದೆ. ಅವರಿಬ್ಬರು ಮಾನ್ಯ ಸದಸ್ಯರೂ ಕೂಡ ಬಹಳ ಕಾಲದಿಂದ ಈ ಸಭೆಯ ಸದಸ್ಯರಾಗಿದ್ದು ದೇಶದ ಆಡಳಿತ ಭಾರವನ್ನು ಹೊತ್ತು ನಡೆಸಿದ್ದಾರೆ. ಈ ಸಭೆಯ ಕಾರ್ಯಕಲಾಪಗಳು ನಡೆಯುವ ವೇಳೆಯಲ್ಲಿ ಅವರಿಗೆ ಅನೇಕ ಅವಕಾಶಗಳು ಸಿಕ್ಕುತ್ತವೆ. ಮುಂದೆ ಬಜೆಟ್ ಚರ್ಚೆಯಾಗುವಾಗ ಅವರಿಗೆ ಅವಕಾಶವಿದೆ, ಅವರು ತಮ್ಮ ವಿವೇಚನೆಯನ್ನು ಪ್ರಯೋಗಿಸಿ ಈ ಸಭೆಯ ಮುಂದೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ತಾವು ಸಾಕಾದಷ್ಟು ಅವಕಾಶವನ್ನು ಕೊಡುತ್ತಿದ್ದೀರಿ. ಆ ಅವಕಾಶಗಳನ್ನು ಪ್ರಯೋಗಿಸಿಕೊಂಡು ಆ ಮಾನ್ಯ ಸದಸ್ಯರು ಈಗ ಮುಖ್ಯ ಮಂತ್ರಿಗಳು ಸಭೆಯಲ್ಲಿ ಕೊಟ್ಟ ಹೇಳಿಕೆಯ ಮೇಲೆ ತಮ್ಮ ಅಭಿಪ್ರಾಯವನ್ನು ಹೇಳಬಹುದು, ತಮ್ಮ ವಿವೇಚನೆಯ ಒರೆಗಲ್ಲಿಗೆ ಹಚ್ಚಿ ಎಷ್ಟು ಕಟುತರವಾಗಿ ಬೇಕಾದರೂ ಟೀಕೆ ಮಾಡುವುದಕ್ಕೆ ಕೂಡ ಅವಕಾಶವಿದೆ. ಅದಕ್ಕೆ ಬದಲಾಗಿ ಈಗ ಕೊಟ್ಟ ಮುಖ್ಯ ಮಂತ್ರಿಗಳ ಹೇಳಿಕೆ ಮೇಲೆ ಈಗಲೇ ಚರ್ಚೆಗೆ ಅವಕಾಶ ಕೊಡಬೇಕೆಂದು ಪುನಃ ಕೇಳುವುದು ಸರಿಯಾಗಿ ಕಾಣುವುದಿಲ್ಲ, ದೇಶಕ್ಕೆ ಬೇಕಾದ ಹಣ ಎಲ್ಲಿ, ಹೇಗೆ ದೊರೆಯುತ್ತದೆ ಎಂಬುದನ್ನು ವಿಹಂಗಮ ದೃಷ್ಟಿಯಿಂದ ನೋಡಬೇಕಾಗಿದೆ. ಅಧ್ಯಕ್ಷರು ಈಗಾಗಲೆ ಕಾರ್ಯಕ್ರಮವನ್ನು ತಾವು ತಿದ್ದುಪಡಿ ಮಾಡುವುದಕ್ಕೆ ಕಾರಣವೇನೆಂಬುದನ್ನು ತಿಳಿಸಿ, ಹಾಗೆ ಮಾಡಿರುವುದು ಸೂಕ್ತವಾಗಿದೆಯೆಂದು ಒಂದು ತೀರ್ಮಾನವನ್ನು ಕೊಟ್ಟಿದ್ದಾರೆ. ಇನ್ನು ಮುಂದೆ ಆ ವಿಚಾರದಲ್ಲಿ ಯಾವ ವಿಧವಾಗಿ ಚರ್ಚೆ ಮಾಡಿದರೂ ತಮ್ಮ ತೀರ್ಮಾನವನ್ನೇ ಚರ್ಚೆ ಮಾಡಿದಂತಾಗುತ್ತದೆ ಎಂಬುದು ನನ್ನ ಅಭಿಪ್ರಾಯ. ಆದುದರಿಂದ ನನ್ನ ಅಭಿಪ್ರಾಯದಲ್ಲಿ ಈ ವಿಚಾರ ಇಲ್ಲಿಗೇ ಕೊನೆಗಾಣುತ್ತದೆ ಎಂದು ಭಾವಿಸುತ್ತೇನೆ.

ಶ್ರೀ ಅಜೀಜ್ ಸೇಟ್.— ಸ್ವಾಮಿ, ಈಗಾಗಲೇ ಆರೂವರೆ ಗಂಟೆಯಾಗಿದೆ, ಅರ್ಧ ಗಂಟೆ ಕಾಲ ಪಾಸ್ತಿಯಾಗಿ ಸಭೆ ನಡೆದಿದೆ. ಇಲ್ಲಿರುವ ಸದಸ್ಯರಲ್ಲಿ ಕೆಲವರು ಆರೋಗ್ಯವಂತರಾಗಿಲ್ಲ, ಬ್ಲಡ್‌ಪ್ರೆಷರ್, ಹಾರ್ಟ್ ಅಟ್ಯಾಕ್ ಮುಂತಾದ ಕಾಯಿಲೆಗಳಿಂದ ನರಳುತ್ತಿದ್ದಾರೆ.

Mr. SPEAKER.—Is Sri Gopala Gowda unwell !

Sri AZEEZ SAIT.—He has just come out of hospital. He was in the hospital during the last session because of blood-pressure.

Mr. SPEAKER.—The House will now stand adjourned to meet tomorrow at One O'clock.

———

The House adjourned at Thirty Minutes past Six of the Clock to meet again at One of the Clock on Wednesday, the 3rd May 1967.

———

WD 8367—GPB—500—25-5-67